Of Course, the Opposition walked out. ಆಗ ಮೇಲೆ ಚರ್ಚೆ ಪ್ರಾರಂಭ ಆಗಿದೆ....

ಶ್ರೀ ಹೆಚ್. ಏಕಾಂತಯ್ಯ : ಇವತ್ತು ಸಹ ನಮ್ಮ ತಕರಾರು ಏನೂ ಇಲ್ಲ. ಇವತ್ತು ಇದು ಸರಿ ಇದೆ ಎಂದು ನಿಮಗೆ ಅನ್ನಿಸಿದರೆ ನನ್ನದು ಏನೂ ತಕರಾರು ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ: ಸರಿ ಪ್ರಶ್ನೆ ಅಲ್ಲ. ಅನುಕೂಲ...

ಶ್ರೀ ಹೆಚ್. ಏಕಾಂತಯ್ಯ: 128 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಇವತ್ತಿನ ದಿವಸ ಪೂರಕ ಅಂದಾಜುಗಳ ರೂಪದಲ್ಲಿ ಈ ಸಭೆಯಲ್ಲಿ ತಾವು ಒಪ್ಪಿಗೆ ಪಡೆದಿದ್ದೀರಿ. ನನ್ನ ಆಸೆ ಏನು ಇತ್ತು ಎಂದರೆ ಇದರ ಬಗ್ಗೆ ಸಹ ಸಾಮಾನ್ಯವಾದ ಚರ್ಚೆ ಮಾಡಬೇಕಾಗಿತ್ತು ಎಂದು. 1990-91ರ ಅಪ್ರೊಪ್ರಿಯೇಷನ್ ಬಗ್ಗೆ ಆದರೆ ಐ ಕೆನ್ ಅಂಡರ್‌ಸ್ಟ್ಯಾಂಡ್. 1990-91ಕ್ಕೆ ಏನು ಪೂರಕ ಅಂದಾಜು ಇವೆ. ಅದರ ಬಗ್ಗೆ ಚರ್ಚೆ ಇಲ್ಲದೆ ತಾವು ಒಪ್ಪಿಗೆ ಪಡೆಯಬೇಕೆಂದು ತಾವು ಪ್ರಯತ್ನ ಮಾಡಿದರೆ ಇದು ಸರಿಯಲ್ಲ ಎಂಬ ಮಾತನ್ನು ಇವತ್ತು ಹೇಳುತ್ತೇನೆ, ಇನ್ನು ಮುಂದೆಯೂ ಸಹ ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ತಮ್ಮ ಕೊನೆಯ ವಾಕ್ಯ ಏನು ಹೇಳಿದ್ದೀರಿ, ಅದಕ್ಕೆ ನನ್ನ ಸಹಮತಿ ಇದೆ. ಆದರೆ ಪರಿಸ್ಥಿತಿ ಈ ರೀತಿ ಇದೆ. ಅಯವ್ಯಯ ಮತ್ತು ಅನುಪೂರಕ ಅಂದಾಜು ಬಗ್ಗೆ ಚರ್ಚೆ ಜೊತೆ ಜೊತೆಯಲ್ಲಿಯೇ ಆಗಬೇಕೆಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನು ವಿಧಾನ ಇತ್ತು, ಅದನ್ನು ನಾವು ಮತ್ತೊಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಬದಲಾವಣೆ ಮಾಡಬಹುದಿತ್ತಲ್ಲ. ಸಪ್ಲಿಮೆಂಟರಿ ಬಜೆಟ್ ಮೇಲೆ ಸಪರೇಟಾಗಿ ಚರ್ಚೆ ಆಗಬೇಕು ಎಂದು ತಾವು ಸೂಚನೆ ಕೊಟ್ಟಿದ್ದರೆ ನಾವು ಖಂಡಿತವಾಗಿಯೂ ಒಪ್ಪಿಕೊಳ್ಳುತ್ತಿದ್ದೆವು. ಎರಡನೆಯದು ಏನು ಆಯಿತು? ಯಾವುದು ಮೊದಲನೆಯ ವ್ಯವಸ್ಥೆಗೆ ತಾವು ಒಪ್ಪಿಕೊಂಡಿದ್ದೀರಿ, ಬದಲಾವಣೆ ಮಾಡಬೇಕಾದಂತಹ ಸೂಚನೆ ತಮ್ಮಿಂದ ಬರುತ್ತಾ ಇದ್ದರೆ ಒಳ್ಳೆಯದಿತ್ತು. ಆದರೆ ಈಗ ಎಲ್ಲಾ ಆದ ಮೇಲೆ ಚರ್ಚೆ ಪ್ರಾರಂಭ ಆದ ಮೇಲೆ ಆಗಲೂ ಕೂಡ ತಾವು ಸೂಚನೆಯನ್ನು ಎತ್ತಿದ್ದರೆ ನಾವು ಸರ್ಕಾರದವರು ಬಹುಶಃ ಒಪ್ಪಿಕೊಳ್ಳುತ್ತಿದ್ದೆವು. ಅದು ಎರಡೂ ಆಗಲಿಲ್ಲ. ನಾನು ಒಪ್ಪುತ್ತೇನೆ. ಯಾವುದರಲ್ಲಿಯೂ ಆದರೂ ಚರ್ಚೆ ಆಗದೇ ಮಂಜೂರು ಆಗುವುದು ನಮಗೂ ವಿಹಿತ ಅಲ್ಲ. ಚರ್ಚೆ ಆಗಬೇಕಾಗುತ್ತದೆ. ಆದರೆ ಪಾಸ್ ಆಗಿದೆ. ಮಂಜೂರಾಗಿದೆ. ಇವತ್ತು ಬೆಳಿಗ್ಗೆ ಏನು ಆಯಿತು? ಎಲ್ಲಾ ಆದ ಮೇಲೆ ಅಂದರೆ ಪಾಸ್ ಆದ ಮೇಲೆ ತಾವು ಆಕ್ಷೇಪಣೆ ಎತ್ತಿದ್ದೀರಿ, ಚರ್ಚೆಗೆ ಅವಕಾಶ ಇರಲಿಲ್ಲ ಅಷ್ಟೇ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ: ಸಂಖ್ಯಾಬಲ ಇದೆ, ತೀರ್ಮಾನ ಆಗಿದೆ, ನಮ್ಮದು ತಕರಾರು ಇಲ್ಲ. ತಮ್ಮಲ್ಲಿ ಸಂಖ್ಯಾಬಲ ಇದೆ, ಒಪ್ಪಿಗೆ ಪಡೆದಿದ್ದೀರಿ.

(ಗೊಂದಲ)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ)

ವಿಧೇಯಕ, 1991

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು: ಮಾನ್ಯ ಉಪಾಧ್ಯಕ್ಷರೆಯವರೇ, ಮಾನ್ಯ ಸಾರಿಗೆ ಮತ್ತು

ವಕ್ಫ್ ಮಂತ್ರಿಯವರ ಪರವಾಗಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 1991 ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನ್ನು ಮಂಡಿಸಲಾಯಿತು

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಉಪಾಧ್ಯಕ್ಷಿಣಿಯವರೇ, ಇದು ಕೂಡ ಆಯವ್ಯಯಕ್ಕೆ ಪೂರಕವಾದಂತಹ ಒಂದು ವಿಧೇಯಕ. ಆದರೆ ಬದಲಾವಣೆ ಮಾಡಬೇಕೆಂದು ಇಚ್ಛೆ ಇತ್ತು. ಅದು ಏನು ಆಯಿತು ಪವರ್ ಟಿಲ್ಲರ್ಸ್‌ಗಳು, ಟ್ರೈಲರ್ಸ್‌ಗಳ ಮೇಲೆ ಏನು ತೆರಿಗೆ ಇತ್ತು, ಅದನ್ನು ಪೂರ್ತಿ ವಿನಾಯಿತಿ ಮಾಡಬೇಕೆಂದು ನಾವು ಕೂಡ ಸರ್ಕಾರದ ಮಟ್ಟಿಗೆ ನಿರ್ಣಯ ತೆಗೆದುಕೊಂಡಿದ್ದೇವೆ. ಆದರೆ ಇವತ್ತು ಬೆಳಿಗ್ಗೆ ಕೂಡ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಅವರು ಹೇಳಿಕೆ ಕೊಟ್ಟಿದ್ದಾರೆ. ಆದರೆ ನಾವು ತಿದ್ದುಪಡಿ ಮಾಡುತ್ತಿಲ್ಲ. ತಿದ್ದುಪಡಿಗೆ ತಿದ್ದುಪಡಿ ಆಗುವುದಿಲ್ಲ. ಈ ತಿದ್ದುಪಡಿಗೆ ತಿದ್ದುಪಡಿ ಆಗುತ್ತಾ ಇದ್ದರೆ ನಾವು ಈಗಾಗಲೇ ಅಕ್ರಾಸ್ ದಿ ಟೇಬಲ್ ಅದನ್ನು ಮೂವ್ ಮಾಡಿ ಅದನ್ನು ಮಂಜೂರು ಮಾಡಬಹುದಾಗಿತ್ತು. ಆದರೆ ಇದಕ್ಕೆ ಕೆಲವು ಪ್ರೊಸೆಸ್ ಇದೆ. ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಮಾಡಿ, ನಮ್ಮ ಕ್ಯಾಬಿನೆಟ್ ರೂಲ್ಸ್ ಬಿಸಿನೆಸ್ ಪ್ರಕಾರ ಒರಿಜಿನಲ್ ಆದರೆ...that has to be approved by the Cabinet. ಆದ್ದರಿಂದ ಒರಿಜಿನಲ್ ತಿದ್ದುಪಡಿ ಆದುದರಿಂದ ಈಗ ನಾವು ತರುವುದಕ್ಕೆ ಆಗುತ್ತಾ ಇಲ್ಲ. But this is a decision of the Govt. to exempt the power tillers and trailers from the taxation. This decision, we have taken.

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ಟ್ರಾಕ್ಟರ್ಸ್ ಬಗ್ಗೆ ಏನು ಮಾಡಿದ್ದೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ: ಟ್ರಾಕ್ಟರ್ಸ್ ಬಗ್ಗೆ ಕೇಳುತ್ತಿದ್ದೀರಿ.

I will clarify later. That is a file I have seen. The tillers & trailers, according to the note, which is sent by the Transport Minister. Other points, I will clarify in the course of the day.

ಆದ್ದರಿಂದ ಇವತ್ತು ನಾವು ತರುತ್ತಿಲ್ಲ, ಈ ತಿದ್ದುಪಡಿ. ಆದರೆ ಇದನ್ನು ನಮ್ಮ ಸರ್ಕಾರ ಸದಿಚ್ಛೆಯಿಂದ ಇವತ್ತು ವಿಚಾರ ಮಾಡಿದ್ದೇವೆ. I therefore request the House to pass this Bill.

ಈ ಒಂದು ಬೇಡಿಕೆಯ ಮಸೂದೆ ಏನು ಇದೆ. ಇದು ನಮ್ಮ ಆಯವ್ಯಯಕ್ಕೆ ಪೂರಕ ಆಗಿದೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ಸರ್ಕಾರದ ತೆರಿಗೆ ನೀತಿ ಬಗ್ಗೆ ಏನು ಹೇಳಬೇಕೋ ನನಗೆ ಗೊತ್ತಾಗುತ್ತಿಲ್ಲ. ಯಾಕೆಂದರೆ ಇವರು ಯಾವ ಉದ್ದೇಶವನ್ನು ಇಟ್ಟುಕೊಂಡು ಇದನ್ನು ಹಾಕಿದ್ದಾರೆ ಎನ್ನತಕ್ಕದ್ದು ಈ ತಿದ್ದುಪಡಿಯನ್ನು ಇಲ್ಲಿ ಮಂಡನೆ ಮಾಡಿದ್ದಾರೆಂದು ನನಗೆ ಅರ್ಥ ಆಗುತ್ತಿಲ್ಲ. ಒಂದು ಸರ್ಕಾರಕ್ಕೆ ಏನಾದರೂ ಹೆಚ್ಚಿನ ಆದಾಯ ಬರಬೇಕು ಎಂದು ಭಾವನೆ ಇಟ್ಟು ಕೊಂಡಿದ್ದಾರೆಯೇ ಅಥವಾ ಯಾರಿಗಾದರೂ ಒಂದು ವರ್ಗಕ್ಕೆ ಸಹಾಯ ಮಾಡಬೇಕೆಂದು ಹೇಳಿ ಇದನ್ನು ಏನಾದರೂ ತಂದಿದ್ದಾರೋ ಗೊತ್ತಿಲ್ಲ. ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿಯವರು ಬೆಳಿಗ್ಗೆ ಸಹ ವಾದವನ್ನು ಮಂಡಿಸಿದರು. ಟ್ರಾಕ್ಟರ್ನು ಪವರ್ ಟಿಲ್ಲರ್‌ಗೆ ಎಕ್ಸಂಪ್ಷನ್ ಮಾಡಬೇಕು ಎಂದು ಕೇಳಿದರು. ಅದೇ ರೀತಿಯಲ್ಲಿ ರೈತಾಪಿ ಜನಗಳು ಟ್ರಾಕ್ಟರ್ಸ್ ಉಪಯೋಗಿಸುತ್ತಾರೆ ಅದಕ್ಕೂ ಸಹ ಎಕ್ಸೆಂಪ್ಷನ್ ಅನ್ನು ಸಂಪೂರ್ಣವಾಗಿ ಕೊಡಬೇಕೆಂದು ಹೇಳಿದರು. ಇದರ ಬಗ್ಗೆ

ಪರಿಶೀಲನೆ ಮಾಡಬೇಕು. ಮುಂದೆ ಅದರೂ ನಿಮ್ಮ ಸರ್ಕಾರ ಇದ್ದರೆ, ನೀವು ಇದ್ದರೆ ಇದನ್ನು ಮಾಡಿ ಎಂದು ನಾನು ಸೂಚನೆ ಕೊಡಬಹುದಲ್ಲ. ಈಗ ಫೈಲ್ ತರಿಸುತ್ತಿದ್ದೀರಿ. ಫೈಲ್ ತೆಗೆದುಕೊಂಡು ಏನು ಮಾಡುವುದು? ಅವರು ಇಲ್ಲಿಯೇ ಕುಳಿತಿದ್ದಾರೆ. ಅವರು ಏನು ಹೇಳುತ್ತಾರೆಂದು ನಾನು ಕೇಳುತ್ತೇನೆ. ತಾವು ಹೇಳಿದ್ದೀರಿ, ಬಿಸಿನೆಸ್ ರೂಲ್ಸ್ ಪ್ರಕಾರ ಕ್ಯಾಬಿನೆಟ್ ರೂಲ್ಸ್ ಪ್ರಕಾರ ಇದನ್ನು ಇಮ್ಮೀಡಿಯಟ್ ಆಗಿ ಅಮೆಂಡ್‌ಮೆಂಟ್ ತಂದು ಮೂವ್ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರವಾಗಿ ಮಾನ್ಯ ಮುಖ್ಯಮಂತ್ರಿಗಳು ಅಶ್ವಾಸನೆಯನ್ನು ಕೊಟ್ಟಿದ್ದಾರೆ. ಆದರೆ ನನಗೆ ಅರ್ಥ ಆಗದೇ ಇರುವುದು ಏನೆಂದರೆ ನಮ್ಮ ಸಾರಿಗೆ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಕುಳಿತುಕೊಂಡು ಸಾರ್ವಜನಿಕ ಪ್ರತಿನಿಧಿಗಳನ್ನು ಕರೆಸಿ ಶಾಸಕರು ಹಿಂದಿನ ಅಧಿವೇಶನದಲ್ಲಿ ಏನು ಹೇಳಿದ್ದಾರೆ, ಏನು ಸಲಹೆಗಳನ್ನು ಕೊಟ್ಟಿದ್ದಾರೆ, ಎಂಬುದರ ಬಗ್ಗೆ ಏನಾದರೂ ವಿಚಾರ ಮಾಡಿದ್ದೀರಾ ಎಂದು ಅಥವಾ ಯಾರೋ ಬರೆದು ಕಳಿಸಿದ ತಕ್ಷಣ ಕ್ಯಾಬಿನೆಟ್‌ನಲ್ಲಿ ಅಪ್ರೂವ್ ಮಾಡಿ ನಮ್ಮ ಮುಂದೆ ಇಡುತ್ತಿದ್ದೀರಲ್ಲ. ಇದು ನನಗಂತೂ ಅರ್ಥ ಆಗುವುದಿಲ್ಲ. ಯಾವ ಪರ್ಪಸ್‌ಗೆ ಮಾಡುತ್ತಿದ್ದೀರಿ? ಈಗ ನೀವು ಏನು ಮಾಡುತ್ತಿದ್ದೀರಿ? ನಾನು ನಿಮಗೆ ಹೇಳಿದ್ದು ಏನು? ನಿಮಗೆ ಟ್ಯಾಕ್ಸ್ ಜಾಸ್ತಿ ಬೇಕು. ನಾನು ಲಾಸ್ಟ್ ಟೈಮ್ ಹೇಳಿದೆ. ಕೆಎಸ್‌ಆರ್‌ಟಿಸಿ ಮೇಲೆ 17 ಪರ್ಸೆಂಟ್ ಆಫ್ ದಿ ಟೋಟಲ್ ಟ್ರಾಫಿಕ್ ರೆವಿನ್ಯೂ ಮೇಲೆ ತೆಗೆದುಕೊಳ್ಳುತ್ತಿದ್ದೀರಿ. ಪ್ರೈವೇಟ್ ಬಸ್‌ನವರಿಂದ ಅದನ್ನು ಒಂದು ಸೀಟಿಗೆ, ಒಂದು ಕ್ವಾರ್ಟರ್‌ಗೆ ಇಷ್ಟು ಎಂದು ತೆಗೆದುಕೊಳ್ಳುತ್ತಿದ್ದೀರಿ. ಇವರದ್ದು ಹಾಗೂ ಅವರದ್ದು ಕಂಪ್ಯಾರಿಸನ್ ಮಾಡಿ ನೋಡಿದರೆ ಗೊತ್ತಾಗುತ್ತದೆ. ಓವರ್ ಲೋಡ್ ಲೆಕ್ಕ ನಾನು ಮಾತನಾಡುವುದಕ್ಕೆ ಹೋಗವುದಿಲ್ಲ. ಪ್ರೈವೇಟ್‌ನವರು ಸುಮಾರು 7-8 ಪರ್ಸೆಂಟ್ ಕಡಿಮೆ ಕೊಡುತ್ತಾರೆ. ಸೋಲ್ ಏರಿಯಾ ಮೇಲೆ ಅವರಿಗೆ ಹಾಕಿ ಎಂದು ಹೇಳಿದೆ. ಈಗ ಅನೇಕ ಜನ ಸದಸ್ಯರು ತಪ್ಪು ತಿಳಿದುಕೊಂಡಿದ್ದಾರೆ. ಪ್ರೈವೇಟ್ ಬಸ್‌ನವರು ಲಾಭ ಮಾಡುತ್ತಾ ಇರತಕ್ಕದ್ದು ನಿಜ. ಕೆಎಸ್‌ಆರ್‌ಟಿಸಿನವರು ಮಾತ್ರ ಲುಕ್ಸಾನು ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಪ್ರೈವೇಟ್ ಬಸ್‌ನವರು ಟ್ಯಾಕ್ಸನ್ನು ಹೇಗೆ ಅವಾಯ್ಡ ಮಾಡುತ್ತಾರೆ ಎಂದರೆ ಇವರು ಫಿಟ್‌ನೆಸ್ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕು. ಫಿಟ್‌ನೆಸ್ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾದರೆ ಆರ್‌ಟಿಓ ಅಥವಾ ಮತ್ತೊಂದು ಕಡೆ ಹೋಗಬೇಕಾದರೆ ಟೆಸ್ಟ್‌ಗೆ ಹೋಗಬೇಕು. ಟೆಸ್ಟಿಗೆ ಹೋದಾಗ ಏನು ಮಾಡುತ್ತಾರೆಂದರೆ 35 ಸೀಟುಗಳನ್ನು ಮಾತ್ರ ಇಟ್ಟಿರುತ್ತಾರೆ. ಆರ್‌ಟಿಓ ಟೆಸ್ಟಿನಿಂದ ಹೊರಗಡೆ ಬಂದ ತಕ್ಷಣ 50 ಸೀಟುಗಳನ್ನು ಮಾಡುತ್ತಾರೆ. ಇದಕ್ಕೋಸ್ಕರವಾಗಿ ನಾನು ಕಳೆದ ಸಾರಿ ಮಾನ್ಯ ರಾಜಶೇಖರ ಮೂರ್ತಿಯವರಿಗೆ ಒಂದು ಸಲಹೆಯನ್ನು ಕೊಟ್ಟಿದ್ದೆ. ನೀವು ಏನು ಮಾಡಬೇಕು ಎಂದರೆ ಯಾವ ತರಹ ಮೆಟಡೋರ್ ವ್ಯಾನ್‌ಗಳಿಗೆ floor area ಟ್ಯಾಕ್ಸ್ ಹಾಕುತ್ತಿದ್ದೀರಿ ಅದೇ ತರಹ ಖಾಸಗೀ ಬಸ್‌ನವರಿಗೂ ಹಾಕಿ. ಆಗ ಹೇಗೆ ಲಾಭದಲ್ಲಿ ನಡೆಸುತ್ತಾರೋ ನೋಡುವ. ಖಾಸಗೀ ಬಸ್‌ನವರಿಗೆ ಇದನ್ನು ಮಾಡುವುದಕ್ಕೆ ನೀವು ತಯಾರು ಇಲ್ಲ. ನಾನು ಇವತ್ತು ಸಹಿತ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. floor area tax ಬರೇ ಖಾಸಗಿ ವ್ಯಾನ್‌ನವರಿಗೆ ಹಾಕಿದರೆ ಉಪಯೋಗ ಇಲ್ಲ. ಖಾಸಗಿ ಬಸ್‌ನವರಿಗೂ ಯಾಕೆ ಹಾಕಬಾರದು? ಇದರ ಬಗ್ಗೆ ನಾನು 2-3 ಬಾರಿ ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಈಗ ಬಜೆಟ್ ಮಾಡುವುದಕ್ಕಿಂತ ನೀವು ನಮ್ಮನ್ನು ಕರೆಸಿ ಮಾತನಾಡುವುದಕ್ಕೆ ಆಗುವುದಿಲ್ಲ. ಬಜೆಟ್ ಸೀಕ್ರೆಟ್, ಎಲ್ಲಿ ನಾವು ಲೀಕ್ ಮಾಡುತ್ತೇವೋ ಎನ್ನುವ ಸಂಶಯ ಬಹುಶಃ ನಿಮ್ಮ ಮನಸ್ಸಿನಲ್ಲಿರಬಹುದು. ನೀವು ಕೊನೆಯಪಕ್ಷ ಈ ಸದನದಲ್ಲಿ ನಾವು ಏನು ಹೇಳುತ್ತೇವೆ ಅದನ್ನಾದರೂ ಕೂಡ ತಾವು ವಿಚಾರ ಮಾಡುತ್ತಿಲ್ಲ. ಯಾರೋ ನಾಲ್ಕು ಜನ ಅಧಿಕಾರಿಗಳು ಬರೆದು ಕಳಿಸುತ್ತಾರೆ, ಅದನ್ನು ನಾವು ಒಪ್ಪಿದರೆ ಹೇಗೆ? ಆದ್ದರಿಂದ ನಿಮ್ಮ ಸರ್ಕಾರಕ್ಕೆ

ಆದಾಯ ಕೂಡ ಹೆಚ್ಚು ಆಗುವುದಿಲ್ಲ. ಅವರೂ ಏನು ಮಾಡುತ್ತಾರೆ ಎಂದರೆ ಅವರಿಗೆ ಇನ್ ಕಂ ಬರತಕ್ಕಂಥಹದಕ್ಕೆ ಯೋಚನೆ ಮಾಡುತ್ತಾರೆ. ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಅನೇಕ ಲಾಗಳು ಇವತ್ತು ಯಾವ ತರಹ ಮಾಡಿಕೊಂಡಿದ್ದಾರೆ ಎಂದರೆ ಅವರಿಗೆ ಇನ್ ಕಂ ಬರುವ ಹಾಗೆ ಮಾತ್ರ, ಮಾಡಿಕೊಂಡಿದ್ದಾರೆ. ಇದು ಮಾನ್ಯ ಮೊಯಿಲಿಯವರಿಗೆ ಗೊತ್ತಿದೆಯೋ ಅಥವಾ ಇಲ್ಲವೋ? ನಾನು ಒಂದು ಸಾರಿ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದಾಗ ಒಂದು ಲಾರಿಯಲ್ಲಿ ಕುಳಿತುಕೊಂಡು ಹೋಗಿದ್ದೆ. ಈ ಚೆಕ್ ಪೋಸ್ಟ್‌ಗಳನ್ನು ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟಿನವರು ಮಾಡಿಕೊಂಡಿರುತ್ತಾರೆ. ಬೇರೆ ಬೇರೆ ರಾಜ್ಯಗಳಿಗೆ ಹೋಗತಕ್ಕಂಥ ಐದಾರು ಚೆಕ್ ಪೋಸ್ಟ್‌ಗಳನ್ನು ಮಾಡಿಕೊಂಡಿರುತ್ತಾರೆ. ನಾನು ಅಲ್ಲಿಗೆ ಹೋದರೆ ಒಬ್ಬ ಇನ್ಸ್‌ಪೆಕ್ಟರ್ ಜೋಬಿನಲ್ಲಿ ಕೆಳಗಡೆಯಿಂದ ಮೇಲುಗಡೆ ವರೆಗೆ ಬರೇ ನೋಟುಗಳೇ ಇತ್ತು. ನಾನು ಜಾಯಿಂಟ್ ಟ್ರಾನ್ಸ್‌ಪೋರ್ಟ್ ಕಮೀಷನರ್ ಅವರನ್ನು ಕರೆದುಕೊಂಡು ಹೋಗಿ ಪಂಚನಾಮ ಮಾಡಿಸಿದೆ. ಆ ಪುಣ್ಯಾತ್ಮ ಜಾಯಿಂಟ್ ಟ್ರಾನ್ಸ್‌ಪೋರ್ಟ್ ಕಮೀಷನರ್ 15 ದಿನ ಆದ ಮೇಲೆ ಕೋರ್ಟಿನಲ್ಲಿ ನನ್ನ ಪೋರ್ಟ್‌ಪೋಲಿಯೋ ಛೇಂಜ್ ಆಗಿದೆ, ಏನೂ ಇಲ್ಲವೆಂದು ಸಾಕ್ಷಿ ಹೇಳಿದ. ನಾನು ಏನು ಮಾಡಬೇಕು? They are meant for only collections.

ಅದರಲ್ಲಿ ನೀವು ಏನಾದರೂ ಟ್ಯಾಕ್ಸ್ ಸ್ಟ್ರಕ್ಚರ್‌ನಲ್ಲಿ ಒಂದು ಬೇಸಿಕ್ ಛೇಂಜ್‌ನ್ನು ತೆಗೆದುಕೊಂಡು ಬರುವುದು ಒಳ್ಳೆಯದು. ನೀವು ಟ್ಯಾಕ್ಸ್ ಸ್ಟ್ರಕ್ಚರ್‌ನಲ್ಲಿ ಬೇಸಿಕ್ ತೆಗೆದುಕೊಂಡು ಬರದೇ ಹೋದರೆ ಕಲೆಕ್ಷನ್‌ನನ್ನು ಅಂದರೆ ಇಲ್ಲೀಗಲ್ ಕಲೆಕ್ಷನ್ ಕಡಿಮೆ ಆಗುವುದಿಲ್ಲ. ಇದನ್ನು ಕಡಿಮೆ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳಿ, ನಾವು ಸಹಾಯ ಮಾಡುತ್ತೇವೆ ಎಂದರೆ ನೀವು ತೆಗೆದುಕೊಳ್ಳುವುದಕ್ಕೆ ತಯಾರು ಇಲ್ಲ. ಇದಕ್ಕೆ ಒಪ್ಪಿಕೊಳ್ಳುವುದಕ್ಕೆ ಸಿದ್ಧ ಇಲ್ಲ. ಅದಕ್ಕಾಗಿ ಅಸಮ್ಮತಿಯನ್ನಂತೂ ನಾವು ಸೂಚನೆ ಮಾಡಬೇಕಾಗುತ್ತದೆ. ಒಪ್ಪಿಗೆ ಅಂತೂ ಕೊಡುವುದಕ್ಕಾಗುವುದಿಲ್ಲ. ನೀವು ಇದನ್ನು ಏನಾದರೂ ಮಾಡಬೇಕೆಂದು ಇದ್ದರೆ ನೀವು ತಿದ್ದುಪಡಿ ತರಬೇಕು ಎಂದು ಇದ್ದೀರಲ್ಲ, ನಾಲ್ಕು ಜನರನ್ನು ಕರೆಸಿ ಮಾತನಾಡಿ. ಅಧಿಕಾರಿಗಳು ಬಹಳ ಒಳ್ಳೆಯವರು. ಎಲ್ಲ ಕೆಟ್ಟವರು ಎಂದು ಸಾರಾಸಗಟಾಗಿ ನಾನು ಹೇಳುವುದಿಲ್ಲ, ಆದರೆ ಒಳ್ಳೆಯ ಆಫೀಸರ್‌ರವರ ಮಾತು ನಡೆಯುವುದಿಲ್ಲ. ಅಧಿಕಾರಿಗಳು ಇಲ್ಲಿಯೇ ಇದ್ದಾರೆ, ಬೇಕಾದರೆ ಸೂಚನೆ ಮಾಡುತ್ತೇನೆ. ಕರೆಸಿ ಕೇಳಿ ನೀವು. ಈ ಟ್ಯಾಕ್ಸ್ ಫಾರಂ ಏನು ಇದೆ ವರ್ಷಕ್ಕೆ 10-15 ಕೋಟಿ ರೂಪಾಯಿ ಸುಲಭವಾಗಿದುದ್ದನ್ನು ಕಲೆಕ್ಟ್ ಮಾಡಿಕೊಳ್ಳುತ್ತೀರಿ. ಜೊತೆಗೆ ಪಬ್ಲಿಕ್ ಹರಾಸ್ ಮಾಡತಕ್ಕಂಥಹದು. ಈಗ ಗೂಡ್ಸ್ ವೆಹಿಕಲ್‌ನವರು ಪ್ರತಿ ದಿನ ಕಂಪ್ಲೆಂಟ್ ಮಾಡುತ್ತಿದ್ದಾರೆ. ಅವರೆಲ್ಲರೂ ಕಳ್ಳರೇನಲ್ಲ. ಎಲ್ಲ ಲಾರಿ ಮಾಲೀಕರು ಕಳ್ಳರಲ್ಲ. ಕೆಲವು ಜನರು ಟ್ಯಾಕ್ಸ್ ಅವಾಯ್ಡ ಮಾಡುತ್ತಾ ಇರಬಹುದು ಅಷ್ಟೇ. ಹರಾಸ್‌ಮೆಂಟ್ ಆಗುತ್ತಿದೆ. ಯಾರಿಂದ ಆಗುತ್ತಿದೆ? ಇದಕ್ಕಾಗಿ ಏನಾದರೂ ಸಿಂಪ್ಲಿಫೈ ಮಾಡಿ. ಟ್ಯಾಕ್ಸೇಷನ್ ಸ್ಟ್ರಕ್ಚರ್‌ನಲ್ಲಿ ನೀವು ಒಂದು ಸಿಂಪ್ಲಿಫಿಕೇಶನ್ ತೆಗೆದುಕೊಂಡು ಬನ್ನಿ. ಇಲ್ಲ ಅಪ್ಪ ಹಾಕಿದ ಆಲದ ಮರ, ಅದಕ್ಕೆ ನೇಣು ಹಾಕಿಕೊಳ್ಳುತ್ತೇವೆ. ಅಂದರೆ ನೇಣು ಹಾಕಿಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ: ಈಗ ಸನ್ಮಾನ್ಯ ವಿರೋಧ ಪಕ್ಷದ ಉಪನಾಯಕರಾದ ಶ್ರೀಮಾನ್ ಸಿಂಧ್ಯರವರು ಹೆಚ್ಚಿನ ಅನುಭವವನ್ನು ಪಡೆದವರು. ಯಾಕೆಂದರೆ ಸಾರಿಗೆ ಇಲಾಖೆಯಲ್ಲಿ ಬಹಳ ಯಶಸ್ವಿ ಆಗಿ ಮತ್ತು ನನ್ನ ದೃಷ್ಟಿಯಲ್ಲಿ ಪರಿಣಾಮಕಾರಿಯಾಗಿ ಈ ಇಲಾಖೆಯನ್ನು ನಡೆಸಿದ್ದಾರೆ. ಆದ್ದರಿಂದ ಅವರ ಸಲಹೆ ನಮಗೆ ಸಹ್ಯ ಆಗುವುದಿಲ್ಲ ಎಂದು ಹೇಳುವುದು ಸರಿಯಲ್ಲ. ತಮ್ಮ ಸಲಹೆ ನಮಗೆ ಬೇಕಾಗಿದೆ. ಸದನದಲ್ಲಿ ಕೊಡಬಹುದು ಅಥವಾ ಹೊರಗೆ ಸಲಹೆ ಕೊಡಬಹುದು.

ತಾವು ಸಲಹೆಯನ್ನು ಹೊರಗೆ ಕೊಟ್ಟರೂ ಕೂಡ ಅದು ಸ್ವೀಕಾರ ಆಗುತ್ತದೆ. ಅದರೆ ತಾವು ಏನು ಸೂಚನೆ ಕೊಟ್ಟಿದ್ದೀರಿ, ನಿಮ್ಮನ್ನು ಮತ್ತು ಇದರ ಬಗ್ಗೆ ಸಾಕಷ್ಟು ಅನುಭವ ಇದ್ದಂತಹ ಮಾನ್ಯ ಸದಸ್ಯರನ್ನು ಕರೆಸಿ ಸಾರಿಗೆ ಸಚಿವರು ಸಭೆಯನ್ನು ನಡೆಸಲಿಕ್ಕೆ ಅವರಿಗೆ ನಾನು ಸೂಚನೆ ಮಾಡುತ್ತೇನೆ. ಸಂಪನ್ಮೂಲ ವೃದ್ಧಿ ಮಾಡಲಿಕ್ಕೆ ಅಥವಾ ಒಂದು ಆಡಳಿತವನ್ನು ಬಿಗಿ ಮಾಡಲಿಕ್ಕೆ ಕೊಡತಕ್ಕಂಥಹ ಸಲಹೆ ನಮ್ಮ ಸರ್ಕಾರಕ್ಕೆ ಯಾವಾಗಲೂ ಸ್ವೀಕಾರಾರ್ಹ.

ಇವರು ಏನು ಸಲಹೆ ಕೊಟ್ಟಿದ್ದಾರೆ. ಆ ಸಲಹೆ ಪ್ರಕಾರ ನಾವು ಒಂದು ಸಭೆಯನ್ನು ಕರೆದು ಇವರ ಸಲಹೆಗಳನ್ನು ಸ್ವೀಕಾರ ಮಾಡುತ್ತೇವೆ. ಏನು ಒಂದು ಸೂಕ್ತವಾದಂತಹ ಬದಲಾವಣೆ ಇಡೀ ವ್ಯವಸ್ಥೆಯಲ್ಲಿ ಮಾಡಬೇಕು, ಇದರ ಬಗ್ಗೆ ಅಲೋಚನೆ ಮಾಡುತ್ತೇವೆ. ಆದ್ದರಿಂದ ಇದಕ್ಕೆ ಒಳಪಟ್ಟು ಇವರು ಸಮ್ಮತಿ ಕೊಡುತ್ತಾರೆ ಎಂಬು ನಾನು ವಿಶ್ವಾಸವನ್ನು ವ್ಯಕ್ತಪಡಿಸುತ್ತಿದ್ದೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "1991ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು ಖಂಡ 2ರಿಂದ 8 ರವರೆಗೆ:

ಉಪಾಧ್ಯಕ್ಷರು: "ಖಂಡ 2ರಿಂದ 8 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 8ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): 1991ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "1991ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.